

# ಪ್ರಾರ್ಥನೆ



**ಸ್ವಾಮಿ ರಾಮಕೃಷ್ಣಾನಂದರಿಂದ ರಚಿತವಾದ ವಿವೇಕಾನಂದ ಪಂಚಕಮ್**

**ಅನಿತ್ಯದೃಶ್ಯೇಷು ವಿವಿಚ್ಯ ನಿತ್ಯಂ**
**ತಸ್ಮಿನ್ ಸಮಾಧತ್ತ ಇಹ ಸ್ಮ ಲೀಲಯಾ |**
**ವಿವೇಕ-ವೈರಾಗ್ಯ-ವಿಶುದ್ಧ ಚಿತ್ತಂ**
**ಯೋಽಸೌ ವಿವೇಕೀ ತಮಹಂ ನಮಾಮಿ ||**

**ವಿವೇಕಜಾನಂದನಿಮಗ್ನಚಿತ್ತಂ**
**ವಿವೇಕದಾನೈಕ ವಿನೋದಶೀಲಮ್ |**
**ವಿವೇಕಭಾಸಾ ಕಮನೀಯಕಾಂತಿಂ**
**ವಿವೇಕಿನಂ ತಂ ಸತತಂ ನಮಾಮಿ ||**

**ಋತಂ ಚ ವಿಜ್ಞಾನಮಧಿಶ್ರಯದ್ಯತ್**
**ನಿರಂತರಂ ಚಾದಿಮಧ್ಯಾಂತಹೀನಮ್ |**
**ಸುಖಂ ಸುರೂಪಂ ಪ್ರಕರೋತಿ ಯಸ್ಯ**
**ಆನಂದಮೂರ್ತಿಂ ತಮಹಂ ನಮಾಮಿ ||**

**ಸೂರ್ಯೋ ಯಥಾಽಂಧಂ ಹಿ ತಮೋ ನಿಹಂತಿ**
**ವಿಷ್ಣುರ್ಯಥಾ ದುಷ್ಟಜನಾನ್ ಭಿನತ್ತಿ |**
**ತಥೈವ ಯಸ್ಯಾಖಿಲನೇತ್ರಲೋಭಂ**
**ರೂಪಂ ತ್ರಿತಾಪಂ ವಿಮುಖೀ ಕರೋತಿ ||**

**ತಂ ದೇಶಿಕೇಂದ್ರಂ ಪರಮಂ ಪವಿತ್ರಂ**
**ವಿಶ್ವಸ್ಯ ಪಾಲಂ ಮಧುರಂ ಯತೀಂದ್ರಮ್ |**
**ಹಿತಾಯ ನೄಣಾಂ ನರಮೂರ್ತಿಮಂತಂ**
**ವಿವೇಕ-ಆನಂದ ತಮಹಂ ನಮಾಮಿ ||**

**ಅ**ನಿತ್ಯವೂ ಇಂದ್ರಿಯಗೋಚರವೂ ಆದ ವಸ್ತುಗಳಲ್ಲಿ ಹುದುಗಿರುವ ನಿತ್ಯವಸ್ತುವನ್ನು ಬೇರ್ಪಡಿಸಿ, ವಿವೇಕ ವೈರಾಗ್ಯಗಳಿಂದ ಪರಿಶುದ್ಧವಾಗಿರುವ ತನ್ನ ಚಿತ್ತವನ್ನು ಲೀಲಾಜಾಲವಾಗಿ ಅದರಲ್ಲಿ ನೆಲೆಸುವಂತೆ ಮಾಡುವ ಈ ವಿವೇಕಿಯನ್ನು ನಾನು ನಮಸ್ಕರಿಸುತ್ತೇನೆ.

**ಯಾ**ರ ಮನಸ್ಸು ವಿವೇಕದಿಂದ ಹುಟ್ಟುವ ಆನಂದದಲ್ಲಿಯೇ ಮುಳುಗಿರುವುದೋ, ಅದನ್ನು ಇತರರಿಗೆ ದಾನಮಾಡಿ ಅದರಲ್ಲಿ ವಿನೋದಪಡುವ ಸ್ವಭಾವವು ಯಾರದೋ, ವಿವೇಕವೆಂಬ ಬೆಳಕಿನಿಂದ ಸುಂದರ ಕಾಂತಿಯನ್ನು ಯಾರು ಹೊಂದಿರುವರೋ ಅಂತಹ ವಿವೇಕಿಯನ್ನು ಸತತವಾಗಿ ನಮಸ್ಕರಿಸುತ್ತೇನೆ.

**ಯಾ**ರ ಸುರೂಪವನ್ನು ಸತ್ಯ-ವಿಜ್ಞಾನಗಳು ಆಶ್ರಯಿಸಿವೆಯೊ, ಯಾರು ನಿರಂತರವೂ ಆದಿ-ಮಧ್ಯ-ಅಂತಗಳಿಲ್ಲದ್ದೂ ಆದ ಸುಖವನ್ನು ಉಂಟುಮಾಡುವನೊ ಅಂತಹ ಆನಂದಸ್ವರೂಪನನ್ನು ನಾನು ನಮಸ್ಕರಿಸುತ್ತೇನೆ.

**ಸೂ**ರ್ಯನು ಕುರುಡುಗತ್ತಲೆಯನ್ನು ಹೋಗಲಾಡಿಸುವಂತೆ, ವಿಷ್ಣುವು ದುಷ್ಟಜನರನ್ನು ಕತ್ತರಿಸುವಂತೆ ಯಾರ—ನೋಡುವವರೆಲ್ಲರ ಕಣ್ಣುಗಳಿಗೂ ಲೋಭವನ್ನುಂಟುಮಾಡುವಂಥ—ರೂಪವು ತಾಪತ್ರಯವನ್ನು ಹೋಗಲಾಡಿಸುವುದೊ..

**ಅಂ**ತಹ, ಗುರುಶ್ರೇಷ್ಠರೂ ಪರಮಪವಿತ್ರರೂ ಲೋಕಪಾಲಕರೂ ಯತೀಂದ್ರರೂ ಮಧುರಸ್ವಭಾವವುಳ್ಳವರೂ ನರರ ಹಿತಕ್ಕಾಗಿ ನರಜನ್ಮವೆತ್ತವರೂ ಆದ 'ವಿವೇಕಾನಂದ'ರಿಗೆ ನಾನು ನಮಸ್ಕರಿಸುತ್ತೇನೆ.

# ಸೂಕ್ತಿಪ್ರಭ

- ನೀವು ಪರಿಶುದ್ಧರಾಗಿ, ಆಗ ಜಗತ್ತು ಪರಿಶುದ್ಧವಾಗಲೇಬೇಕು.
- ಅಲ್ಪವಾದುದನ್ನು ನೀವು ತ್ಯಾಗ ಮಾಡಿದರೆ ಮಹತ್ತಾದುದು ನಿಮಗೆ ದಕ್ಕುತ್ತದೆ.
- ಜೀವನವೆಂದರೆ ಹೋರಾಟ ಮತ್ತು ಭ್ರಮನಿರಸನಗಳ ಒಂದು ಸರಣಿ.
- ತಮ್ಮಲ್ಲೇ ಶ್ರದ್ಧೆಯುಳ್ಳ ವ್ಯಕ್ತಿಗಳು ಮಾತ್ರ ಶ್ರೇಷ್ಠರೂ ಶಕ್ತಿವಂತರೂ ಆಗಿರುವರು.
- ನೀವು ಭಯಪಟ್ಟಾಗ ಯಾತಕ್ಕೂ ಬಾರದವರಾಗುತ್ತೀರಿ. ಭಯವೇ ಈ ಪ್ರಪಂಚದಲ್ಲಿ ಮಹದ್ದುಃಖಕ್ಕೆ ಕಾರಣ.
- ಸತ್ಯವು ನಿಮ್ಮನ್ನು ಎಲ್ಲಿಗೆ ಒಯ್ದರೂ ನೀವು ಅಲ್ಲಿಗೆ ಹೋಗಿ. ನಿಮ್ಮ ಭಾವನೆಗಳ ಚರಮಸೀಮೆಯನ್ನು ಮುಟ್ಟಿ. ಹೇಡಿಗಳಾಗಬೇಡಿ, ಆಷಾಢಭೂತಿಗಳಾಗಬೇಡಿ.
- ಜ್ಯೋತಿಷ್ಯ ಮುಂತಾದ ರಹಸ್ಯವಿದ್ಯೆಗಳನ್ನೆಲ್ಲ ನೆಚ್ಚುವುದು ದೌರ್ಬಲ್ಯದ ಚಿಹ್ನೆ. ಈ ಸ್ವಭಾವ ನಿಮ್ಮ ಮನಸ್ಸಿನಲ್ಲಿ ಬಲವಾಗುತ್ತಿದ್ದರೆ ನೀವು ಒಬ್ಬ ವೈದ್ಯನನ್ನು ನೋಡಿ; ಒಳ್ಳೆಯ ಆಹಾರವನ್ನು ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳಿ.
- ವಯಸ್ಸಾದಂತೆಲ್ಲ ಪೌರುಷದಲ್ಲಿ ಎಲ್ಲವೂ ಇರುವಂತೆ ನನಗೆ ತೋರುತ್ತದೆ. ಇದೇ ನನ್ನ ಹೊಸ ಸಂದೇಶ.

—ಸ್ವಾಮಿ ವಿವೇಕಾನಂದ